**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಸಿ.ಸಿ. ನಂಃ1426/2022</u> ಡಿ.ಡಬ್ಲ್ಯೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **05.08.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟೀ ಸವಾಲುಃ** ಫೀರ್ಯಾದಿ ಪರ ಶ್ರೀ **ಎಚ್.ಆರ್.ಎಸ್** ವಕೀಲರಿಂದಃ</u>

ನಾನು **10** ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಹಾಗೂ ಇಂಗ್ಲೀಷ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸಾಕ್ಷಿಯು ಕನ್ನಡ ಭಾಷೆ ಮಾತ್ರ ಓದಲು ಮತ್ತು ಬರೆಯಲು ಬರುತ್ತದೆ ಎಂದು ನುಡಿಯುತ್ತಾರೆ. ನಾನು **10** ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದು, ಇಂಗ್ಲೀಷ ಭಾಷೆ ಓದಲು ಹಾಗೂ ಬರೆಯಲು ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿಯನ್ನು ಇಂಗ್ಲೀಷ ಭಾಷೆಯಲ್ಲಿ ಮಾಡುತ್ತೇನೆ ಎಂದರೆ ಸರಿ.

ನಿಪಿ-**1** ಚೆಕ್ ನನ್ನ ಖಾತೆಗೆ ಸೇರಿರುತ್ತದೆ ಎಂದರೆ ಸರಿ. ನಿಪಿ-**1**(ಎ) ಸಹಿ ನನಗೆ ಸೇರಿರುತ್ತದೆ ಎಂದರೆ ಸರಿ. ನಾನು ಚಾಮನಹಳ್ಳಿ ಬಿ.ಜಿ.ಎಸ್ ವೃತ್ತದ ಬಳಿ **2020** ರಿಂದ ವಾಸ ಮಾಡುತ್ತಿದ್ದೇನೆ. ನಾನು ಅದಕ್ಕಿಂತ ಹಿಂದಿನಿಂದಲೂ ಸದರಿ ಸ್ಥಳದಲ್ಲಿ ವಾಸ ಮಾಡುತ್ತಿದ್ದರೂ ಸಹ **2020** ರಿಂದ ವಾಸ ಮಾಡುತ್ತಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಸದ ಮನೆ ಬಾಡಿಗೆ ಮನೆಯಾಗಿರುತ್ತದೆ. ಸದರಿ ಮನೆಯಲ್ಲಿ ವಾಸ ಮಾಡಿದ ಬಾಬ್ತು ಬಾಡಿಗೆ ಕರಾರು ಮಾಡಿಕೊಂಡಿದ್ದೆನು. ಸದರಿ ಮನೆಯ ಬಾಡಿಗೆ ಕರಾರನ್ನು ಹಾಜರುಪಡಿಸಲು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ಸದರಿ ಮನೆಯನ್ನು ಖಾಲಿ ಮಾಡಿರುತ್ತೇನೆ ಹಾಗೂ ಸದರಿ ದಾಖಲೆ ಹುಡುಕಿದ್ದರೇ ಸಿಗಬಹುದು, ಆದರೆ ಸಿಗುತ್ತದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರಿದು ಮನೆ ಖಾಲಿ ಮಾಡುವ

ಸಮಯದಲ್ಲಿ ಮನೆ ಮಾಲೀಕರು ಸದರಿ ದಾಖಲೆಯನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಬಾಡಿಗೆ ಕರಾರನ್ನು ಮಾಡಿಕೊಂಡಿದ್ದೇ ಆದರೆ ಸದರಿ ಕರಾರು ನನ್ನ ಬಳಿ ಇರುತ್ತದೆ ಹೊರತು ಅವರ ಬಳಿ ಇರುವುದಿಲ್ಲ ಎಂದರೆ ಸಾಕ್ಷಿಯು ಮನೆಯನ್ನು ಬಾಡಿಗೆಗೆ ಪಡೆದುಕೊಳ್ಳುವ ಸಮಯದಲ್ಲಿ ನೀಡಿದ್ದ ಮುಂಗಡ ಹಣವನ್ನು ವಾಪಸ ಪಡೆಯುವ ಸಮಯದಲ್ಲಿ ದಾಖಲೆಯನ್ನು ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿದಂತೆ ಬಾಡಿಗೆ ಕರಾರುಪತ್ರ ಮನೆಯಲ್ಲಿ ಇರುತ್ತದೆಯೇ ಅಥವಾ ಮನೆ ಮಾಲೀಕರಿಗೆ ವಾಪಸ ನೀಡಲಾಗಿರುತ್ತದೆಯೇ ಎಂಬ ಪ್ರಶ್ನೆಗೆ ಮೂಲ ದಾಖಲೆಯನ್ನು ಮನೆಯ ಮಾಲೀಕರಿಗೆ ವಾಪಸ ನೀಡಿದ್ದು, ಅದರ ಪ್ರತಿ ಮನೆಯಲ್ಲಿ ಹುಡುಕಿದರೇ ಸಿಗಬಹುದು ಎಂದು ನುಡಿಯುತ್ತಾರೆ. ಸದರಿ ಬಾಡಿಗೆ ಕರಾರು ರೂ.100/- ಚಾಪಕಾಗದದ ಮೇಲೆ ಇರುತ್ತದೆ. ಚಾಪಕಾಗದವನ್ನು ಮನೆಯ ಮಾಲೀಕರೇ ಖರೀದಿ ಮಾಡಿರುತ್ತಾರೆ. ಸದರಿ ಚಾಪಕಾಗದವನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಬಾಡಿಗೆ ಕರಾರುಪತ್ರವನ್ನು ಎಲ್ಲಿ ಬರೆಸಲಾಗಿರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ, ಸದರಿಯವರು ನನ್ನ ಆಧಾರ ಕಾರ್ಡನನ್ನು ಪಡೆದುಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಬರೆದ ಬಿಕ್ಲಂ ಮತ್ತು ಸಾಕ್ಷಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಸಾಕ್ಷಿ ಮುಂದುವರಿದು ಸದರಿಯವರು ಬಂದು ನನ್ನಿಂದ ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ದಾಖಲೆಯನ್ನು ನಾನು ಓದಿ ತಿಳಿದು ನಂತರ ಸಹಿ ಮಾಡುತ್ತೇನೆ. ಸದರಿ ಬಾಡಿಗೆ ಕರಾರಿನ ಬಾಬ್ತು ನಾನು ರೂ.50 ಸಾವಿರ ಮುಗಂಡ ಹಣವನ್ನು ನೀಡಿರುತ್ತೇನೆ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಮನೆಯ ಬಾಡಿಗೆ ಸಲುವಾಗಿ ಫೀರ್ಯಾದಿಯಿಂದ ಮನೆಯ ಬಾಡಿಗೆಯ ಮುಗಂಡ ಹಣ ಪಾವತಿಸಲು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸಾಕ್ಷಿಯು ಮುಗಂಡ ಹಣ

ಹಾಗೂ ಮನೆ ಸಾಮಾನುಗಳನ್ನು ಖರೀದಿಸಲು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೇ ಬಾಡಿಗೆ ಕರಾರು ಆಗಿರುವುದಿಲ್ಲ ಹಾಗೂ ಬಾಡಿಗೆ ಮುಗಂಡ ಹಣ ಕಟ್ಟಲು ಫಿರ್ಯಾಧಿದಾರರಿಂದ ರೂ.3 ಲಕ್ಷ ಹಣವನ್ನು ಪಡೆದುಕೊಂಡಿದ್ದೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಫಿರ್ಯಾದಿಯವರ ಹತ್ತಿರ ಜೆಸಿಬಿ ಕೆಲಸಕ್ಕೆ ಹೋಗಿರುತ್ತೇನೆ, ಸಾಕ್ಷಿ ಮುಂದುವರಿದು ಫಿರ್ಯಾದಿಯವರು ತೋಟದಲ್ಲಿ ಪೈಪಲೈನ್ ಅಳವಡಿಸುವ ಸಲುವಾಗಿ ಹಾಗೂ ಜಮೀನು ಮಟ್ಟಾ ಮಾಡಲು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅಂದಾಜು ಒಟ್ಟು 2 ರಿಂದ 3 ತಿಂಗಳು ಕೆಲಸ ಮಾಡಿರುತ್ತೇನೆ. ಫಿರ್ಯಾಧಿಗೆ ಸೇರಿದ ಎಷ್ಟು ಎಕರೆ ಜಮೀನಿನಲ್ಲಿ ಕೆಲಸ ಮಾಡಿರುತ್ತೇನೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಪ್ರತಿ ಗಂಟೆಗೆ ರೂ.900 ದರ ಇದ್ದು, ಒಮ್ಮೆ ಕೆಲಸಕ್ಕೆ ಹೋದರೇ 8 ರಿಂದ 9 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಪ್ರತಿಧಿನ ನಾನು ರೂ.8 ರಿಂದ 9 ಸಾವಿರ ಮೊತ್ತದಷ್ಟು ಕೆಲಸ ಮಾಡುತ್ತಿದ್ದೆನು. ನಾನು ಮೊಟ್ಟಮೊದಲಿಗೆ ಯಾವ ದಿನಾಂಕ, ತಿಂಗಳು ಹಾಗೂ ವರ್ಷದಲ್ಲಿ ಫಿರ್ಯಾದಿ ಹತ್ತಿರ ಕೆಲಸಕ್ಕೆ ಹೋಗಿರುತ್ತೀಯಾ ಎಂದರೆ ಸಾಕ್ಷಿಯು ಏಪ್ರಿಲ್ 2020 ರಲ್ಲಿ ಹೋಗಿರುತ್ತೇನೆ, ಸಾಕ್ಷಿ ಮುಂದುವರಿದು ಏಪ್ರಿಲ್-2021 ರಲ್ಲಿ ಹೋಗಿರುತ್ತೇನೆ ಎಂದು ಪುನಃ ನುಡಿಯುತ್ತಾರೆ. ನಾನು ಅಂದಾಜು ಒಟ್ಟು 3 ತಿಂಗಳ ವರೆಗೆ ಫಿರ್ಯಾದಿಯ ಹತ್ತಿರ ಕೆಲಸ ಮಾಡಿರುತ್ತೇನೆ. ನಾನು ಏಪ್ರಿಲ್-2021 ರಿಂದ 2022 ರವರೆಗೆ ಮಾಡಿರುತ್ತೇನೆ, ನನಗೆ ಯಾವ ತಿಂಗಳು ಎಂದು ನಿಖರವಾಗಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಫಿರ್ಯಾದಿಯು ನನಗೆ ಜೆಸಿಬಿ ಕೆಲಸದ ಬಾಬ್ತು ರೂ.70 ರಿಂದ 80 ಸಾವಿರ ಹಣ ಪಾವತಿ ಮಾಡಬೇಕಾಗಿತ್ತು. ನಾನು ಮೇಲೆ ನುಡಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಫಿರ್ಯಾದಿಯು ನನಗೆ ಜೆಸಿಬಿ ಕೆಲಸದ ಬಾಬ್ತು ಬಾಕಿ ಹಣ ನೀಡಬೇಕಾದ ಬಗ್ಗೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಿರುತ್ತೀರಾ

ಎಂದರೆ ಸಾಕ್ಷಿಯು ನಾನು ಸದರಿಯವರಿಂದ ಪಡೆದುಕೊಂಡ ರೂ.3 ಲಕ್ಷ ಹಣದಲ್ಲಿ, ಅವರು ಕೊಡಬೇಕಾದ ಹಣವನ್ನು ಕಟಾವು ಮಾಡಿಕೊಂಡು ಉಳಿದ ಹಣ ಕೊಡು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ದಿನಾಂಕ 10.06.2021 ರಲ್ಲಿ ಪಡೆದುಕೊಂಡಿರುತ್ತೇನೆ. ಮುಂಗಡ ಹಣವನ್ನು ಪಡೆದುಕೊಂಡೆ ಎನ್ನಲಾದ ಸಮಯದಲ್ಲಿ ನಾನು ಹಾಗೂ ನನ್ನ ಸ್ನೇಹಿತ ಶಬರೀಶರವರು ಇದ್ದೆವು. ಸದರಿ ದಿನದವರೆಗೂ ನನಗೆ ಫಿರ್ಯಾದಿಯವರ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ. ಹಣ ಪಡೆದುಕೊಂಡೆ ಎನ್ನಲಾದ ದಿನ ನಾನು ಫಿರ್ಯಾದಿಗೆ ಭದ್ರತೆಗಾಗಿ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ. ನಾನು ಮುಂಗಡ ಹಣ ಪಡೆದುಕೊಂಡೆ ಎನ್ನಲಾದ ದಿನ ನನ್ನೊಂದಿಗೆ ಶಬರೀಶರವರು ಹಾಜರಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮುಂಗಡ ಹಣವನ್ನು ಪಡೆದುಕೊಂಡಿದ್ದೆ ಎನ್ನಲಾದ ಬಾಬ್ತು ಫಿರ್ಯಾದಿಯವರು ನನ್ನಿಂದ ಸಹಿ ಮಾಡಿದ ಖಾಲಿ ಚೆಕ್ಕನ್ನು ಪಡೆದುಕೊಂಡಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಫಿರ್ಯಾದಿದರಾರು ಶಬರೀಶರವರಿಂದ ಸಹಿ ಮಾಡಿದ 2 ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ಪಡೆದುಕೊಂಡಿದ್ದೆ ಎನ್ನಲಾದ ಮುಗಂಡ ಹಣದಲ್ಲಿ ಜೆಸಿಬಿ ಹಣವನ್ನು ಕಟಾವು ಮಾಡಿಕೊಂಡು ಉಳಿದ ಹಣವನ್ನು ನೀಡಲು ಹೇಳಿರುತ್ತಾರೆ ಎಂದು ಮುಖ್ಯ ವಿಚಾರಣೆಯಲ್ಲಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಫಿರ್ಯಾದಿಯು ಅವರ ಗದ್ದೆಯಲ್ಲಿ ಕೆಲಸ ಮಾಡಿಸಿಕೊಂಡಿದ್ದು, ನನ್ನ ಜೆಸಿಬಿ ವಾಹನದ ಚಕ್ರಗಳ ಗಾಳಿಯನ್ನು ಬಿಟ್ಟು ನನ್ನ ಗಾಡಿ ಅಲ್ಲೇ ನಿಲ್ಲುವಂತೆ ಮಾಡಿರುತ್ತಾರೆ ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಜೆಸಿಬಿ ವಾಹನ ನನ್ನ ಅತ್ತೆಯ ಹೆಸರಿನಲ್ಲಿ ಇರುತ್ತದೆ. ಸದರಿ ವಾಹನದ ಮಾಲೀಕರು ನನ್ನ ಅತ್ತೆಯಾಗಿರುತ್ತಾರೆ. ಸದರಿ ಜೆಸಿಬಿ ವಾಹನದ ಸಂ.ಕೆಎ-11-ಎನ್-

5709 ಎಂದು ಇರುತ್ತದೆ. ಸದರಿ ವಾಹನದ ಮಾಲೀಕನಾನಗಿರುವುದಿಲ್ಲ ಎಂದರೆ ಸರಿ. ನನ್ನ ಮಾಲೀಕತ್ವಕ್ಕೆ ಒಳಪಟ್ಟಿರುವ ಜೆಸಿಬಿ ವಾಹನ ಇರುವುದಿಲ್ಲ. ನನಗೆ ಸೇರಿರುವ ಯಾವುದೇ ಜೆಸಿಬಿ ವಾಹನ ಇಲ್ಲದಿದ್ದರೂ ಸಹ ಫಿರ್ಯಾದಿಯವರು ತಮ್ಮ ಜಮೀನಿನಲ್ಲಿ ನನಗೆ ಸೇರಿದ ಜೆಸಿಬಿ ವಾಹನ ಜಪ್ತು ಮಾಡಿದ್ದರು ಎಂದು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-3 ಮತ್ತು 4 ಪೋಟೋದಲ್ಲಿರುವ ಜೆಸಿಬಿ ವಾಹನ ನನ್ನ ಅತ್ತೆಗೆ ಸೇರಿರುತ್ತದೆ. ಸದರಿ ದಾಖಲೆಗಳನ್ನು ನಾನು ಈ ಪ್ರಕರಣದ ಸಲುವಾಗಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-3 ಮತ್ತು 4 ಬೇರೆ ಬೇರೆ ಸ್ಥಳಕ್ಕೆ ಸೇರಿರುತ್ತದೆ ಎಂದರೆ ಸಾಕ್ಷಿಯು ಜೆಸಿಬಿ ವಾಹನದ 2 ಕಡೆಯ ಪೋಟೋ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಫಿರ್ಯಾದಿದಾರರು ತಮ್ಮ ಜಮೀನಿನಲ್ಲಿ ಜೆಸಿಬಿ ವಾಹನವನ್ನು ಜಪ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜಪ್ತು ಮಾಡಲಾಗಿರುತ್ತದೆ ಎನ್ನುವ ಬಾಬ್ತು ಫಿರ್ಯಾದಿದಾರರ ವಿರುದ್ಧ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿಯು ಪೊಲೀಸ ಠಾಣೆಗೆ ಹೋಗಿ ಪೊಲೀಸರಿಗೆ ತಿಳಿಸಿದ್ದು, ಸದರಿಯವರು ನನ್ನನ್ನು ವಿಚಾರಣೆ ಮಾಡಿದ್ದು, ನಾನು ಫಿರ್ಯಾದಿದಾರರಿಗೆ ರೂ.3 ಲಕ್ಷ ಹಣ ಕೊಡಬೇಕಾಗಿದ್ದು, ಅದರ ಬಾಬ್ತು ನನ್ನ ವಾಹನವನ್ನು ನಿಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪೊಲೀಸ ಠಾಣೆಯಲ್ಲಿ ದೂರು ನೀಡಿರುತ್ತೇನೆ, ಸಾಕ್ಷಿ ಮುಂದುವರಿದು ನಾನು ದೂರು ನೀಡಿದ ಬಾಬ್ತು ಪೊಲೀಸರು ಫಿರ್ಯಾದಿಯನ್ನು ಠಾಣೆಗೆ ಕರೆಸಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಪೊಲೀಸ ಠಾಣೆಯಲ್ಲಿ ನನಗೆ ಒಂದು ರಸೀದಿಯನ್ನು ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ಖಂಡಿಕೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಫಿರ್ಯಾದಿಯು ಪೊಲೀಸ ಠಾಣೆಯಲ್ಲಿ ರೂ.3,55,000/- ಹಣವನ್ನು ಕೊಡಲು ಹೇಳಿರುತ್ತಾರೆ ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ಹಣ ಪಾವತಿಗಾಗಿ ನನ್ನ ಅತ್ತೆ ಬಸಮ್ಮಣೆರವರು ರೂ.1,55,000/- ಹಾಗೂ ರೂ.2 ಲಕ್ಷ ಮೊತ್ತದ 2 ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಫಿರ್ಯಾಧಿಗೆ ನೀಡಿರುತ್ತಾರೆ ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಿನಾಂಕ 15.10.2021 ರಂದು ನಾವು ಪೊಲೀಸರಿಗೆ ಎಲ್ಲಾ ಚೆಕ್ಕುಗಳನ್ನು ವಾಪಸ ಕೊಡಿಸಿ ನಾವು ಫಿರ್ಯಾದಿಗೆ ಹಣವನ್ನು ನಗದು ರೂಪದಲ್ಲಿ ನೀಡುತ್ತೇವೆ ಎಂದು ಕೇಳಿರುತ್ತೇವೆ ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಫಿರ್ಯಾದಿಗೆ ಠಾಣೆಗೆ ಬರಲು ಹೇಳಿದ್ದಾಗ ಫಿರ್ಯಾದಿಯು ತಾನು ಬೇರೆ ಊರಿಗೆ ಹೋಗಿರುತ್ತೇನೆ ಹಾಗೂ ಸಾವಿಗೆ ಹೋಗಿರುತ್ತೇನೆ ಎಂದು ಪೊಲೀಸರಿಗೆ ಹೇಳಿರುತ್ತಾರೆ ಎನ್ನುವ ವಿಚಾರ ಸಹ ಸುಳ್ಳು ಎಂದರೆ ಸರಿಯಲ್ಲ.

ಶಬರೀಶ ನನ್ನ ಸ್ನೇಹಿತನಾದ ಕಾರಣ ಮತ್ತು ಬಸಮ್ಮಣೆ ನನ್ನ ಅತ್ತೆಯಾದ ಕಾರಣ ನಾವೆಲ್ಲಾ ಶಾಮೀಲಾಗಿ ಫಿರ್ಯಾಧಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಬರೀಶ ಮತ್ತು ನನ್ನ ಅತ್ತೆ ಬಸಮ್ಮಣೆರವರು ಫಿರ್ಯಾಧಿಯೊಂದಿಗೆ ಮಾಡಿಕೊಂಡಿರುವ ವ್ಯವಹಾರ ಮತ್ತು ನನ್ನ ವ್ಯವಹಾರ ಪ್ರತ್ಯೇಕವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿದರಾರಿಂದ ನನ್ನ ಕಾನೂನುಬದ್ದ ಅವಶ್ಯಕತೆಗಾಗಿ ಪಡೆದುಕೊಂಡಿದ್ದ ರೂ.5 ಲಕ್ಷ ಹಣವನ್ನು ಮರುಪಾವತಿಸಲು ಬದ್ದನಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬಳಿ ಯಾವುದೇ ಜೆಸಿಬಿ ವಾಹನ ಇರುವುದಿಲ್ಲ ಮತ್ತು ನಾನು ಫಿರ್ಯಾದಿದಾರರ ಹತ್ತಿರ ಯಾವುದೇ ಜೆಸಿಬಿ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿದಾರರಿಗೆ ರೂ.3,55,000/- ಹಣ ನೀಡುವ ಬಗ್ಗೆ ಪೊಲೀಸ ಠಾಣೆಯಲ್ಲಿ ತೀರ್ಮಾನವಾಗಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ದಿನಾಂಕ 18.10.2021 ರಂದು ಪಡೆದುಕೊಂಡ ರೂ.5 ಲಕ್ಷ ಹಣವನ್ನು ವಾಪಸ

ಕೊಡಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ದಿನಾಂಕ **18.10.2021** ರಂದು ರೂ.**5** ಲಕ್ಷ ಹಣ ಪಡೆದುಕೊಂಡ ಬಾಬ್ತು ನಿಪಿ-**1** ಚೆಕ್ ಭದ್ರತೆಗಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ಹಣ ಪಡೆದುಕೊಂಡ ದಿನದಿಂದ ನಿಪಿ-**1** ಚೆಕ್ಕಿಗೆ ದಿನಾಂಕ **27.12.2021** ನಮೂದು ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಫಿರ್ಯಾದಿಯಿಂದ ಪಡೆದುಕೊಂಡ ಹಣವನ್ನು ಸದರಿಯವರು ವಾಪಸ ಕೇಳಿದ್ದಾಗ ನಾನು ಸದರಿಯವರಿಗೆ ನಿಪಿ-**1** ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಣಪಡಿಸಿಕೊಳ್ಳಲು ತಿಳಿಸಿರುತ್ತೇನೆ ಎಂದರೆ ಸರಿ. ನಾನು ತಿಳಿಸಿದಂತೆ ನಿಪಿ-**1** ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ್ದು, ಸದರಿ ಚೆಕ್ ನಗದೀಕರಣ ಆದಗೇ ನಿಪಿ-**2** ರಂತೆ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಫಿರ್ಯಾದಿದಾರರಿಗೆ ಚೆಕ್ಕನ್ನು ಬರೆದು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಫಿರ್ಯಾದಿಯಿಂದ ಹಣ ಪಡೆದುಕೊಂಡು ನಿಪಿ-**1** ಚೆಕ್ಕನ್ನು ಬರೆದು ಕೊಟ್ಟಿದ್ದರೂ ಸಹ ಕೊಟ್ಟಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ಕು ನಗದೀಕರಣ ಆಗದ ಬಾಬ್ತು ಫಿರ್ಯಾದಿದರರು ನನ್ನನ್ನು ಭೇಟಿ ಮಾಡಿ ಹಣ ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೆ ಯಾವುದೋ ಹಣ ಬರಬೇಕಾಗಿದ್ದು, ಸದರಿ ಹಣವನ್ನು ಹೊಂದಿಸಿ ಕೊಡುತ್ತೇನೆ ಎಂದು ಭರವಸೆ ಕೊಟ್ಟಿದ್ದೆನು ಎಂದರೆ ಸರಿಯಲ್ಲ. ನಾನು ಸದರಿಯವರಿಗೆ ಹಣ ಮರುಪಾವತಿ ಮಾಡದ ಬಾಬ್ತು ನಿಪಿ-3 ರಂತೆ ನೋಟಿಸ ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ವಿಚಾರ ನನಗೆ ಗೊತ್ತಿಲ್ಲದಂತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-**3** ನೋಟಿಸಿನಲ್ಲಿ ತಿಳಿಸಿರುವ ವಿಚಾರಗಳು ನನಗೆ ಗೊತ್ತಿದ್ದರೂ ಸಹ ನಾನು ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಸದರಿ ನೋಟಿಸಿಗೆ ನನ್ನ ವಕೀಲರ ಮುಖಾಂತರ ನಾನು ಪ್ರತ್ಯುತ್ತರ ನೋಟಿಸ ಜಾರಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪ್ರತ್ಯುತ್ತರ ನೋಟಿಸಿಗೆ

ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು, ಶಬರೀಶ ಮತ್ತು ನನ್ನ ಅತ್ತೆ ಬಸಮ್ಮಣಿರವರು ವಕೀಲರ ಹತ್ತಿರ ಒಟ್ಟಾಗಿ ಹೋಗಿರುತ್ತೇವೆ. ನಾವು 3 ಜನ ಶಾಮೀಲಾಗಿ ಫೀರ್ಯಾಧಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಡಿ-1 ರಂತೆ ಸುಳ್ಳು ನೋಟಿಸ ಜಾರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಫೀರ್ಯಾದಿದಾರರಿಂದ ಪಡೆದುಕೊಂಡ ರೂ.5 ಲಕ್ಷ ಪೂರ್ಣ ಹಣವನ್ನು ಪಾವತಿ ಮಾಡಬೇಕಾಗಿದ್ದು, ಬರೀ ರೂ. 3,55,000/- ಹಣ ಮಾತ್ರ ಪಾವತಿ ಮಾಡಬೇಕಾಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ-3 ಮತ್ತು 4 ಫೋಟೋಗಳಿಗೂ ಹಾಗೂ ಈ ವ್ಯವಹಾರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಫೀರ್ಯಾದಿಯಿಂದ ಹಣವನ್ನು ಪಡೆದುಕೊಂಡಿದ್ದರೂ ವಾಪಸ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ:</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**